೫೪ ಇ.ಎಮ್.ಡಿ. ವಿನಾಯಿತಿ ಆದೇಶವನ್ನು ಹೊರಡಿಸುವಾಗ ಆದಕ್ಕೆ ಮೂರು ಅಥವಾ ಐದು ವರ್ಷಗಳ ಕಾಲದ ದೀರ್ಘಾವಧಿಯನ್ನು ಕೊಡುವಂತೆಯೂ ಅದರ ನವೀಕರಣ ಆದೇಶವನ್ನು ಅವಧಿ ಅಂತ್ಯದೊಳಗೆ ಹೊರಡಿಸುವಂತೆಯೂ ಆದೇಶಿಸಬೇಕು.

೫೫ ವಿಧಾನ ಮಂಡಲದಲ್ಲಿ ಒಂದು ಸಾರ್ವಜನಿಕ ಉದ್ಯಮಗಳ ಸಮಿತಿ ಇದ್ದು ಆ ಸಮಿತಿಯು ಅದರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಹಲವು ನಿಗಮ, ಮಂಡಳಿ ಕಂಪನಿಗಳ ಲೆಕ್ಕಪತ್ರ ಕಾರ್ಯ ದಕ್ಷತೆ ಇತ್ಯಾದಿ ವಿಷಯಗಳನ್ನು ಪರಿಶೀಲಿಸುವುದು. ಈ ಕಾರ್ಯದೊಂದಿಗೆ ಸಮಿತಿಯು ಕನ್ನಡಿಗರಿಗೆ ಸೂಕ್ತ ಪ್ರಮಾಣದ ಉದ್ಯೋಗಾವಕಾಶ ದೊರೆಯುತ್ತಿರುವುದೇ ಎಂಬ ವಿಷಯವನ್ನು ಸಹ ಪರಿಶೀಲಿಸಿದರೆ ಇದರಿಂದ ಉದ್ಯೋಗಗಳ ಆಡಳಿತ ವರ್ಗದ ಮೇಲೆ ತೀವ್ರವಾದ ಪರಿಣಾಮ ಉಂಟಾಗುವುದು. ನಿಸ್ಸಂದೇಹ. ಈ ಪರಿಶೀಲನೆಗೆ ಅವಕಾಶವಾಗುವಂತೆ ಸಮಿತಿಯ ಕಾರ್ಯ ವಿಧಾನಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಬೇಕು.

೫೬ ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳು ಜಾಹೀರಾತುಗಳನ್ನು ಕರ್ನಾಟಕದಲ್ಲಿ ಮುದ್ರಣವಾಗುವ ಪತ್ರಿಕೆಗಳಿಗೆ ಮಾತ್ರ ಪ್ರಕಟಿಸಲು ಕೊಡಬೇಕು.

೫೭ ಎಂಪ್ಲಾಯ್‌ಮೆಂಟ್ ನ್ಯೂಸ್ ಈ ಪತ್ರಿಕೆಯ ಮಾದರಿಯಲ್ಲಿ ರಾಜ್ಯ ಸರಕಾರವು ಒಂದು ಪತ್ರಿಕೆಯನ್ನು ಪ್ರಕಟಿಸಬೇಕು.

೫೮ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ವಿಷಯ ವಸ್ತುಗಳಲ್ಲಿ ಅರಾಬಿಕ್, ಚೈನೀಸ್, ಫ್ರೆಂಚ್, ಜರ್ಮನ್, ಲ್ಯಾಟಿನ್, ಪೂಲಿ ಪರ್ಶಿಯನ್, ರಷ್ಯನ್, ಸ್ಪಾನಿಷ್–ಈ ಅನಾವಶ್ಯಕ ವಿಷಯಗಳನ್ನು ತೆಗೆದು ಹಾಕಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಆರೋಗ್ಯ ಘಟಕವನ್ನು ತೆರೆಯದಿರುವಂತೆ ನೀಡಿರುವ ಆದೇಶದ ಬಗ್ಗೆ

೪೦೨ ಶ್ರೀ ವಸಂತ ವಿ. ಸಾಲ್ಯಾನ (ಕಾಪು) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಅಧಿಕಾರಕ್ಕೆ ಬಂದ ನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಹೊಸ ಆರೋಗ್ಯ ಘಟಕಗಳನ್ನು ತೆರೆಯಬಾರದೆಂದು ಆದೇಶ ನೀಡಿರುವುದು ನಿಜವೇ ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಲು ಮಂಜೂರಾತಿ ನೀಡಲಾಗಿದೆಯೆ ?

ಇ) ಈ ಯೋಜನೆಗಾಗಿ ಎಷ್ಟು ಹಣವನ್ನು ಜಿಲ್ಲಾ ಪರಿಷತ್ತಿಗೆ ನೀಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು) —

ಅ) ಹೌದು

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೩ ಪ್ರಾಥಮಿಕ ಆರೋಗ್ಯ ಘಟಕಗಳನ್ನು ೧೯೮೯–೯೦ ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

(ಅನುಬಂಧ–೧ ರಲ್ಲಿ ವಿವರಣೆ ನೀಡಲಾಗಿದೆ)

ಇ) ಈ ಯೋಜನೆಗಾಗಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ಗೆ ೧೯೮೯–೯೦ ನೇ ಸಾಲಿಗೆ ಸಾಮಾನ್ಯ ಯೋಜನೆಯಲ್ಲಿ ಒಟ್ಟು ೧೩.೬೦ ಲಕ್ಷ ರೂ.ಗಳನ್ನು ಮತ್ತು ಆದಿವಾಸಿ–ಗಿರಿಜನ ಉಪ ಯೋಜನೆಯಡಿಯಲ್ಲಿ ಒಟ್ಟು ೨೦.೦೦ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ ೪೦೨ಕ್ಕೆ

ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಸ್ಥಳ
೧	೨	೩
೧	ಬೆಳ್ತಂಗಡಿ	ಉಜ್ರೆ
೨	–"–	ಹತ್ಯಡ್ಕ
೩	–"–	ಪೆಣೂರು
೪	ಬಂಟ್ವಾಳ	ವಾಮನಪಡುವು
೫	–"–	ಅದ್ಯದಡ್ಕ
೬	–"–	ದೈವಸ್ಥಳ
೭	–"–	ಮಾಣಿ
೮	–"–	ಬೆಂಚಿನಪಡುವು
೯	–"–	ಸಜ್ಜಿವನಾಡು
೧೦	ಕುಂದಾಪುರ	ಶಂಕರನಾರಾಯಣ
೧೧	–"–	ತಿರೂರು
೧೨	–"–	ಮರವಂತೆ
೧೩	–"–	ಹಾಲಡಿ
೧೪	–"–	ಗಂಗೊಳ್ಳಿ
೧೫	ಕಾರ್ಕಳ	ದೊಂಡೆರಂಗಡಿ
೧೬	–"–	ಬೆಳಮಣಿ
೧೭	–"–	ಶಿರ್ವಾಡಿ
೧೮	–"–	ಬಜಗೊಳಿ
೧೯	ಮಂಗಳೂರು	ಕಂಪಡುವು
೨೦	–"–	ಕುಡಂಪು
೨೧	–"–	ನಾಟೀಕಲ್
೨೨	ಪುತ್ತೂರು	ಕೊಳ್ತಿಗೆ
೨೩	–"–	ಈಶ್ವರಮಂಗಳ
೨೪	–"–	ತಿಂಗಳಾಡಿ
೨೫	ಸುಳ್ಯ	ಗುತ್ತಿಗಾರು
೨೬	ಉಡುಪಿ	ಪೆರಡ್ಕ
೨೭	–"–	ಕೊಕ್ಕರ್ಣೆ
೨೮	–"–	ಪೇತ್ರಿ
೨೯	–"–	ಶಿರ್ವಾ
೩೦	–"–	ಬಾರ್ಕೂರು
೩೧	–"–	ಕಾಪು
೩೨	–"–	ಮಣಿಪುರ
೩೩	–"	ಕೊಳಲಗೇರಿ.